(ದಿನಾಂಕಃ 29-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಪಾಟಿ ಸವಾಲು ಃ ಶ್ರೀ ಪಿ.ಆರ್.ಸಿ. ಪ್ರತಿವಾದಿ ಪರ ವಕೀಲರಿಂದ -

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನನ್ನ ಗಂಡನ ಹೆಸರು ಮಹಮ್ಮದಶಫಿ ಗಜಬರಸಾಬ ನದಾಫ ಇರುತ್ತದೆ. ನನ್ನ ಗಂಡನ ಹೆಸರಿನಲ್ಲಿ ಸರ್ವೆ ನಂ. 118 ರಂತೆ ಹೊಲ ಇತ್ತು ಎಂದರೆ ಸರಿ . ಸದ್ರಿ ಜಮೀನು ಹುಕ್ಕೇರಿಯ ಪಶ್ಚಿಮದಲ್ಲಿ ಜಾಬಾಪೂರ ಹದ್ದಿಯಲ್ಲಿದೆ ಎಂದರೆ ಸರಿ . ಅವರ ಹೆಸರಿನಲ್ಲಿ 7 ಎಕರೆ 11 ಗುಂಟೆ ಜಮೀನು ಇತ್ತು. ಸದ್ರಿ ಹೊಲದಲ್ಲಿ ಹೆಚ್ಚಿನ ಕ್ಷೇತ್ರದಲ್ಲಿ ಬಿನ್ ಶೇತಗಿ ಮಾಡಿರುತ್ತಾರೆ ಎಂದರೆ ಸರಿ . ಬಿನ್ ಶೇತಗಿ ಆದ ನಂತರ ಯಾವ ಯಾವ ನಂಬರ ಬಿದ್ದಿರುತ್ತವೆ ಎಂದು ನನಗೆ ಹೇಳಲು ಆಗುವುದಿಲ್ಲ. 1992 ರಲ್ಲಿ 2 ಎಕರೆ ಜಮೀನನ್ನು ಬಿನ್ ಶೇತಗಿ ಮಾಡಿಸಿರುತ್ತೇವೆ. ಸದ್ರಿ ಬಿನ್ ಶೇತಗಿ ಕ್ಷೇತ್ರ ಪೂರ್ವ ದಿಕ್ಕಿಗೆ ಬರುತ್ತದೆ. ಅದರ ಬಳಿಕ ನನ್ನ ಗಂಡ ವೃತ್ತೆ 2 ಎಕರೆ 10 ಗುಂಟೆ ಜಮೀನನ್ನು ಬಿನ್ ಶೇತಗಿ ಮಾಡಿಸಿರುತ್ತಾರೆ. 30 ಗುಂಟೆ ಶೇತಗಿ ಜಮೀನು 2 ಎಕರೆ 10 ಗುಂಟೆಯ ಪೂರ್ವ ಬದಿಗೆ ಆಗುತ್ತದೆ.

ನನ್ನ ಗಂಡ ಪಿ.ಯುಸಿ ದ್ವಿತಿಯ ವರ್ಷದವರೆಗೆ ಓದಿದ್ದರು. ನಾನು ನನ್ನ ಗಂಡ ಮತ್ತು ಮಕ್ಕಳು ಹುಕ್ಕೇರಿಯಲ್ಲಿ ಒಂದೇ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ನನ್ನ ಗಂಡ ತನ್ನ ಹೆಸರಿನಲ್ಲಿದ್ದ ಜಮೀನನ್ನು ಕಾಲಕಾಲಕ್ಕೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ಮಾರಾಟ ಮಾಡಿದ ವಿಷಯವನ್ನು ನನಗೆ ಹೇಳುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡ ಮೊದಲಿನಿಂದಲೂ ಇಂಗ್ಲೀಷಿನಲ್ಲಿ ಸಹಿ ಮಾಡುತ್ತಿದ್ದನು ಎಂದರೆ ನಾನು ನೋಡಿರುವುದಿಲ್ಲ. ಇಂಗ್ಲೀಷಿನಲ್ಲಿ ಸಹಿ ಮಾಡುತ್ತಿದ್ದ ವಿಷಯ ನನಗೆ ಹೇಳುತ್ತಿದ್ದ ಎಂರದೆ

ಸರಿಯಲ್ಲ. ಸಾಕ್ಷಿ ಮುಂದುವರೆದು ಹೊರಗಿನ ವಿಷಯವನ್ನು ನನಗೆ ಹೇಳುತ್ತಿರಲಿಲ್ಲ ಎನ್ನುತ್ತಾರೆ. 2 ಎಕರೆ 10 ಗುಂಟೆ ಜಮೀನಿನಲ್ಲಿ ಬಿನ್ ಶೇತಗಿ ಆಗಿದ್ದು ಅದರಲ್ಲಿ 46 ಪ್ಲಾಟಗಳು ಬಿದ್ದಿರುತ್ತವೆ ಎಂದು ಹೇಳಿದ್ದು ಅದನ್ನು ಹೊರತು ಪಡಿಸಿ ನನಗೆ ಬೇರೆ ಏನೂ ಹೇಳಿರುವುದಿಲ್ಲ. ಸರ್ವೆ ನಂ. 118 ರಲ್ಲಿ ಯಾಗಿಗೆ ಪ್ಲಾಟ ಮಾರಾಟ ಮಾಡಿರುತ್ತಾನೆ ಎಂದು ನನ್ನ ಗಂಡನಿಗೆ ಕೇಳಿರುವುದಿಲ್ಲ.

ಈ ದಾವೆಯನ್ನು 5 ಮಂದಿಯ ವಿರುದ್ಧ ಮಾಡಿರುತ್ತೇನೆ ಎಂದರೆ ಸರಿ . ದಾವೆ ಮಾಡಿದ ದಾವಾಸ್ತಿ ಒಟ್ಟು 30 ಗುಂಟೆ ಕ್ಷೇತ್ರ ಇರುತ್ತದೆ. ಈ ಸಂಪೂರ್ಣ 30 ಗುಂಟೆ ಕ್ಷೇತ್ರ ದಲ್ಲಿ ಪ್ರತಿವಾದಿ 1 ರಿಂದ 5 ರವರು ಇಲ್ಲ ಎಂದರೆ ಸರಿ. 30 ಗುಂಟೆ ಕ್ಷೇತ್ರದಲ್ಲಿ 1 ರಿಂದ 5 ನೇ ಪ್ರತಿವಾದಿಯರು ಮತ್ತು ಶಿವರುದ್ರಪ್ಪ ಮಲ್ಲಪ್ಪ ಗಾಣಿಗೇರ, ಮಲ್ಲಪ್ಪ ಅಣ್ಣಪ್ಪ ಬಾಸ್ಕರ, ಶಿವಾನಂದ ಮಹಾಲಿಂಗ ದರಬಾರೆ , ದೇವರಾಜ ಮಹಾಲಿಂಗ ದರಬಾರೆ , ಕಲೀಲಹಮ್ಮದ ಬಾಗವಾನ , ಇರಫಾನ ಯಾಕೂಬ ಖಂಡಾಯತ, ಅಮಿನಸಾಬ ಮಹಮ್ಮದಹುಸೇನ ಅಫೀಜ , ಮೀರಾಸಾಬ ಗೌಸಾಸಾಬ ಬಡಗಾಂವಿ ಇವರೆಲ್ಲರೂ ಸ್ವಾ ಧೀನದಲ್ಲಿರುತ್ತಾರೆ ಎಂದರೆ ಸರಿ . ಅವರು ಎಷ್ಟು ವರ್ಷದಿಂದ ಸ್ವಾ ಧೀನದಲ್ಲಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿದಂತಹ ವ್ಯಕ್ತಿಗಳ ಮೇಲೆ ನಾನು ದಾವೆ ಸಲ್ಲಿಸಿರುವುದಿಲ್ಲ. ಯಾರು ಇಮಾರತ ಕಟ್ಟಿರುತ್ತಾರೆ ಅವರ ವಿರುದ್ಧ ದಾವೆ ಹೂಡಿರುತ್ತೇನೆ ಎನ್ನುತ್ತಾರೆ.

ತುಕಾರಾಮ ಕೋಳಿ ಇವರು ಮೊದಲಿನಿಂದಲೂ ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ . 2 ನೇ ಪ್ರತಿವಾದಿ ಶಂಕರ ಕಟ್ಟಿ ಇವರೂ ಸಹ ಮಹಿಳಾ ಮತ್ತು ಮಕ್ಕಳ ಇಲಾಖಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಖಾಸಿಂ ಅಬ್ದುಲಸಾಹೇಬ ಬಾಗವಾನ ಇವರು ಟೇಲರಿಂಗ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ . ಖಾಸಿಂಸಾಬ ಇವರಿಗೆ 3 ಜನ ಸಹೋದರರು ಇದ್ದು ಅವರು ಟೇಲರಿಂಗ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ದಿಲಶಾದಬೇಗಂ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡಿ ಈಗ ನಿವೃತ್ತಿ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 5 ನೇ

ಪ್ರತಿವಾದಿ ಗೋಕಾಕಿನ ಹತ್ತಿ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ 118 ರ ಜಮೀನಿನಲ್ಲಿ ದಕ್ಷಿಣ ಬದಿಗೆ 2015 ನೇ ಸಾಲಿನಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 5 ಮಂದಿ ಪ್ರತಿವಾದಿಯರು ದಾವೆ ಮಾಡುವ ಮುಂಚೆ ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿ . 1 ನೇ ಪ್ರತಿವಾದಿ ಕಟ್ಟಿದ ಮನೆ ದಕ್ಷಿಣಾಭಿಮುಖವಾಗಿದ್ದು ಆರ್ ಸಿ ಸಿ ಛಾವಣಿ ಇದ ಎಂದರೆ ಸರಿ . ಸದ್ರಿ ಕಟ್ಟಡ ಕಟ್ಟಲು ಸುಮಾರು 1 ವರ್ಷ ಅವಧಿ ಬೇಕಾಗುತ್ತದೆ ಎಂದರೆ ಸರಿ . 5 ಮಂದಿ ಪ್ರತಿವಾದಿಯರು ದಾವಾ ಸರ್ವೆ ನಂಬರಿನಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ .

1 ನೇ ಪ್ರತಿವಾದಿ ಮನೆ ಕಟ್ಟುವುದನ್ನು ನಿಲ್ಲಿಸಲು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. 1 ನೇ ಪ್ರತಿವಾದಿ ಕಟ್ಟಿಸಿದ ಮನೆ ಸುಮಾರು 20 ಲಕ್ಷ ರೂ. ಬೆಲೆ ಬಾಳುತ್ತದೆ ಎಂದರೆ ಸರಿ . ಶಂಕರ ಕಟ್ಟಿ ಇವರು ಕಟ್ಟಿದ ಮನೆ ಆರ್ ಸಿ ಸಿ ಇದೆ ಎಂದರೆ ಸರಿ. ಸದ್ರಿ ಮನೆಗೆ ಸಂಬಂಧಿಸಿದ 2 ಛಾಯಾಚಿತ್ರಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಡಿ-1 ಮತ್ತು ನಿ.ಡಿ-2 ಎಂದು ಗುರುತಿಸಲಾಯಿತು. 2 ನೇ ಪ್ರತಿವಾದಿ ಕಟ್ಟಿಯವರು ಸದ್ರಿ ಮನೆ ಕಟ್ಟಿ 20 ವರ್ಷಗಳಾಗಿರುತ್ತವೆ ಎಂದರೆ ಸರಿ .

3 ನೇ ಪ್ರತಿವಾದಿ ಖಾಸಿಂಸಾಬ ಇವರು 2 ಮನೆಗಳನ್ನು ದಾವಾಸ್ತಿಯಲ್ಲಿ ಕಟ್ಟಿಸಿರುತ್ತಾರೆ ಎಂದರೆ ಸರಿ . ಸದ್ರಿ ಮನೆಗಳಿಗೆ ಸಂಬಂಧಿಸಿದ 2 ಛಾಯಾಚಿತ್ರಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಡಿ-3 ಮತ್ತು ನಿ.ಡಿ-4 ಎಂದು ಗುರುತಿಸಲಾಯಿತು. ಸದ್ರಿ 2 ಮನೆಗಳನ್ನು ಕಟ್ಟಿಸಿ 15 ವರ್ಷಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವೆ ದಾಖಲ ಮಾಡುವ ಪೂರ್ವದಲ್ಲಿ ಸುಮಾರು 10 ವರ್ಷಗಳ ಹಿಂದೆ ನೋಡಿರುತ್ತೇನೆ . ಅದೇ ರೀತಿ 3 ನೇ ಪ್ರತಿವಾದಿಯ ಸಹೋದರ 1 ಮನೆ ದಾವಾಸ್ತಿಯಲ್ಲಿ ಕಟ್ಟಿಸಿರುತ್ತಾರೆ ಎಂದರೆ ಸರಿ. ಸದ್ರಿ ಮನೆಗೆ ಸಂಬಂಧಿಸಿದ 2 ಛಾಯಾಚಿತ್ರಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದರಿಂದ

ಅವುಗಳನ್ನು ನಿ.ಡಿ-5 ಮತ್ತು ನಿ.ಡಿ-6 ಎಂದು ಗುರುತಿಸಲಾಯಿತು. 4 ನೇ ಪ್ರತಿವಾದಿ ದಿಲಶಾದಬೇಗಂ ಇವರು 1 ಮನೆ ದಾವಾಸ್ತಿಯಲ್ಲಿ ಕಟ್ಟಿಸಿರುತ್ತಾರೆ ಎಂದರೆ ಸರಿ . ಸದ್ರಿ ಮನೆಗೆ ಸಂಬಂಧಿಸಿದ 2 ಛಾಯಾಚಿತ್ರಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಡಿ-7 ಮತ್ತು ನಿ.ಡಿ-8 ಎಂದು ಗುರುತಿಸಲಾಯಿತು. 5 ನೇ ಪ್ರತಿವಾದಿ ಅಬ್ದುಲಖಾದರ ಇವರು 1 ಮನೆ ದಾವಾಸ್ತಿಯಲ್ಲಿ ಕಟ್ಟಿಸಿರುತ್ತಾರೆ ಎಂದರೆ ಸರಿ . ಸದ್ರಿ ಮನೆಗೆ ಸಂಬಂಧಿಸಿದ 2 ಛಾಯಾಚಿತ್ರಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಡಿ-9 ಮತ್ತು ನಿ.ಡಿ-10 ಎಂದು ಗುರುತಿಸಲಾಯಿತು.

ಸದ್ರಿ ಮನೆಗಳನ್ನು ನೋಡಿದರೆ ಪ್ರತಿಯೊಂದೂ ಮನೆಯು ಸುಮಾರು 50 ಲಕ್ಷ್ಯ ರೂ. ಕಿಮ್ಮತ್ತು ಆಗಬಹುದು. 1 ರಿಂದ 5 ನೇ ಪ್ರತಿವಾದಿಯರು ಈ ಎಲ್ಲ ಮನೆಗಳನ್ನು ಕಟಟಲು ಹುಕ್ಕೇರಿ ಪಟ್ಟಣ ಪಂಚಾಯತಿಯಿಂದ ಪರವಾನಿಗೆ ಪಡೆದುಕೊಂಡು ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ರಿಂದ 5 ನೇ ಪ್ರತಿವಾದಿಯರು ಎಷ್ಟು ಕ್ಷೇತ್ರದಲ್ಲಿ ಮನೆ ಕಟ್ಟಿರುತ್ತಾರೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. 1 ರಿಂದ 5 ನೇ ಪ್ರತಿವಾದಿಯರು ಅಡ್ಡಾದಿಡ್ಡಿಯಾಗಿ ಕಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ.

**( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು.)**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**